
## ಪದಬಂಧ



ಎಡದಿಂದ ಬಲಕ್ಕೆ:

1. ಪತ್ರೆಯಾಗಲಿಲ್ಲವೆಂದದ್ದು ಪಾತರಗಿತ್ತಿಯ ನಿಕಟ ಸಂಬಂಧಿ (3)
3. ಪರಿಮಳದ ಇಂಥ ಬಳಕೆಯಿಂದ ಭಾರೀ ತೊಂದರೆಯಾದೀತು (3)
4. ತಕ್ಷಣದ ಪರಿಹಾರ ತೋರುವಲ್ಲಿ ಆಕೆಗೆ ತುಂಬ ಸಾಮರ್ಥ್ಯ ಇದೆ (3)
6. ಪಾರಾಯಣದ ಸಂದರ್ಭದಲ್ಲಿ ಹೀಗೊಂದು ಪ್ರಸಂಗ (4)
7. ಹಂಗಿಸಿದಾತನ ಬಗೆಗೆ ತೀವ್ರ ಶತ್ರುತ್ವ (4)
9. ಕೇಳಿದ ಕಡೆ ಇಲ್ಲವೆಂದರೆ ತಳದಲ್ಲಿ ರಬಹುದು ನೋಡಿ (4)
11. ಸಾಲಕ್ಕೆಂದು ಬಂದ ವಸ್ತುಗಳ ನೇರ ಜೋಡಣೆ ಮೇಲಿಂದ ಕೆಳಕ್ಕೆ (4)
15. ಜರತಾರಿ ತಯಾರಿಸಲು ತಕ್ಕ ರಾಜ ಲೋಹ (3)
16. ಡೋಲಾಯಮಾನ ಸ್ಥಿತಿಯಲ್ಲಿದೆ ಯುದ್ಧ (3)
17. ಕೇಡಿನ ಕಾಲ– ನೆನೆದರೇ ಕಂಪನ (3)

ಮೇಲಿಂದ ಕೆಳಕ್ಕೆ:

1. ಪಂದ್ಯ ಗೆದ್ದಿದ್ದಕ್ಕೆ ಈ ಬಹುಮಾನ (3)
2. ಗಾರ್ದಭ ನುಗ್ಗಬಂದರೆ ಹೆದರಿಸು (3)
3. ಪುರವಣಿ ಸಿದ್ಧಪಡಿಸುವುದರಲ್ಲಿ ತುಂಬ ನಿಷ್ಣಾತ (3)
5. ತರಗು ಸಂಗ್ರಹಿಸಿ ತರಲೂ ಸುಂಕ ಕೊಡಬೇಕೇ? (3)
6. ಪತಿಯ ಕೈಗೆ ಹೇಗೆ ಬಂತು ಈ ಬಾವುಟ? (3)
8. ಒಲವಿನ ಪ್ರದರ್ಶನಕ್ಕೆ ನಾಟ್ಯವಿಶಾರದ ಹಕ್ಕಿ (3)
10. ಮುರುಗನ ಭಕ್ತ, ಹಳ್ಳಿಯ ಸರಳ ಮನುಷ್ಯ (3)
12. ಬಿಡುವಾಯಿತೆಂದರೆ ಸಾಕು, ಬರೀ ಜಂಬದ ಮಾತು (3)
13. ವಾರ್ತೆಯನ್ನ ಓದಿದ್ದಕ್ಕೆ ಸಂಬಳ? (3)
14. ಕುಚೇಲನಂತಿದ್ದಾನೆ ಡ್ರೈವರು (3)

### 20-11-14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಭ್ಯಂತರ; 3. ಸುರಭಿ; 4. ಜಾತಕ; 6. ಬಲಹೀನ; 7. ಲವಕುಶ; 9. ರಸಾರುಹ; 12. ಅನುರಾಗ; 14. 'ರಿದಮಾ' (ಮಾದರಿ ಹಿಂದು ಮುಂದು); 15. ಭರಣಿ; 16. ರಿಣಮುಕ್ತಿ.

ಮೇಲಿಂದ ಕೆಳಕ್ಕೆ:

1. ಅಭಿಮಾನ; 2. ರಜಾಕಾಲ; 3. ಸುಫಲ; 5. ಕಲಕು; 6. ಬಡಿವಾರ; 8. ಶರವೇಗ; 10. ಸಾವೇರಿ; 11. ಹಟಮಾರಿ; 12. ಅತಿಭಕ್ತಿ; 13. ರಾಗಿಣಿ.


## ಪ್ರಶ್ನಾಂಕಣ

# ನಾರ್ವಾಲ್- ಅದೆಂಥ ಪ್ರಾಣಿ?

ನಾರ್ವಾಲ್–ಅದೊಂದು ವಿಧದ ತಿಮಿಂಗಿಲ. ಚಿಕ್ಕ ಗಾತ್ರದ ತಿಮಿಂಗಿಲಗಳಲ್ಲೊಂದಾಗಿದ್ದು, ಹಾಗಿದ್ದೂ ಹದಿಮೂರರಿಂದ ಹದಿನೈದು ಅಡಿ ಉದ್ದದ ಶರೀರದ ಈ ಪ್ರಾಣಿ ಇತರ ಎಲ್ಲ ತಿಮಿಂಗಿಲಗಳಂತೆಯೇ ಸಂಪೂರ್ಣ ಸಾಗರವಾಸಿ. ಉತ್ತರ ಧ್ರುವವನ್ನು ಪರಿವರಿಸಿರುವ ಆರ್ಕ್‌ಟಿಕ್ ಸಾಗರ–ಅದರಲ್ಲೂ ಗ್ರೀನ್‌ಲ್ಯಾಂಡ್ ಮತ್ತು ಬಫಿನ್ ದ್ವೀಪಗಳ ಅಸುಪಾಸಿನ ಸಾಗರವಾರ ನಾರ್ವಾಲ್‌ಗಳ ನೆಲೆ.

ತಿಮಿಂಗಿಲಗಳ ಎರಡು ವರ್ಗಗಳಲ್ಲೊಂದಾದ 'ಹಲ್ಲಿನ ತಿಮಿಂಗಿಲಗಳ' ಗುಂಪಿಗೆ ನಾರ್ವಾಲ್ ಸೇರಿದೆ. (ಬಲೀನ್ ತಿಮಿಂಗಿಲಗಳದು ಮತ್ತೊಂದು ಗುಂಪು). ಕಡಲಿನ ನಾನಾ ವಿಧ ಮತ್ಸ್ಯಗಳನ್ನು– ವಿಶೇಷವಾಗಿ 'ಕಾಡ್' ಮೀನುಗಳನ್ನು ಬೇಟೆಯಾಡಿ ತಿನ್ನುವ ಈ ತಿಮಿಂಗಿಲ ದೃಢವಾದ ಎರಡು ದಂತ ಪಂಕ್ತಿಗಳನ್ನು ಪಡೆದಿದೆ.

ವಿಶೇಷ ಏನೆಂದರೆ ನಾರ್ವಾಲ್‌ಗಳ ಗಂಡುಗಳಲ್ಲಿ ಮಾತ್ರ ಮೇಲ್ದವಡೆಯ ದಂತ ಪಂಕ್ತಿಯ ಮಧ್ಯದ ಒಂದೇ ಒಂದು ಹಲ್ಲು ಈಟಿಯಂತೆ ಚಾಚಿ ಬೆಳೆಯುತ್ತದೆ (ಚಿತ್ರ 1,2 ನೋಡಿ). ಒಂಬತ್ತರಿಂದ ಹತ್ತು ಅಡಿ ಉದ್ದ ಬೆಳೆವ ಈ 'ದಂತ' ತಲೆಯಿಂದ ಚಾಚಿ ಬೆಳೆದ ತಿರುಚಿದ ಕೊಂಬಿನಂತೆ ಗೋಚರಿಸುತ್ತದೆ. ವಿಪರ್ಯಾಸ ಏನೆಂದರೆ ಹೀಗೆಯೇ ದಂತಧಾರಿಗಳಾಗಿರುವ ಆನೆ ಮತ್ತು ವಾಲ್ರಸ್‌ಗಳಂತೆಯೇ ನಾರ್ವಾಲ್ ಕೂಡ ದಂತಗಳ ಬೇಟೆಗಾರರ ಬಂದೂಕಕ್ಕೆ ಗುರಿಯಾಗಿದೆ. ವಾಸ್ತವವಾಗಿ ನಾರ್ವಾಲ್ ಗಂಡುಗಳ ದಂತ ಅವಕ್ಕೆ ನಿಸರ್ಗ ತೊಡಿಸಿರುವ ಅಲಂಕಾರ; ಸಂತಾನ ಕಾಲದಲ್ಲಿ ಹೆಣ್ಣುಗಳನ್ನು ಆಕರ್ಷಿಸಲು ನೆರವಾಗುವ ಶೃಂಗಾರ. ನಾರ್ವಾಲ್ ದಂತಕ್ಕೆ ಇನ್ನಾವುದೇ ಉದ್ದೇಶ–ಉಪಯೋಗ ಇಲ್ಲ.




ಗ್ರೀನ್‌ಲ್ಯಾಂಡ್ ಮತ್ತಿತರ ಆರ್ಕ್‌ಟಿಕ್ ಪ್ರದೇಶದ ದ್ವೀಪಗಳ 'ಇನೂಯಿಟ್' ಜನ ತಮ್ಮ ಬದುಕಿಗೆ ನಾರ್ವಾಲ್‌ಗಳನ್ನೇ ಅವಲಂಬಿಸಿದ್ದಾರೆ. ಈ ದಂತಧಾರೀ ತಿಮಿಂಗಿಲಗಳನ್ನು ಪ್ರತಿ ವರ್ಷ ಸಾವಿರಗಟ್ಟಳೆ ಸಂಖ್ಯೆಗಳಲ್ಲಿ ಗುಂಡಿಟ್ಟು ಕೊಲ್ಲುತ್ತಾರೆ (ಚಿತ್ರ–2). ಅವುಗಳ ಮಾಂಸವನ್ನು ಆಹಾರಕ್ಕೂ, ಕೊಬ್ಬನ್ನು ಒಲೆ–ದೀಪಗಳನ್ನು ಉರಿಸಲಿಕ್ಕೂ, ಚರ್ಮ– ಎಲುಬುಗಳನ್ನು ಇತರ ನಾನಾ ಕೆಲಸಗಳಿಗೂ ಬಳಸಿ ದಂತವನ್ನು ಹಣಕ್ಕಾಗಿ ಮಾರುತ್ತಾರೆ. ಪೌರಾಣಿಕ 'ಏಕಶೃಂಗಿ'ಯ ಮಿಥ್ಯಾ ಕಲ್ಪನೆಯ ಮೂರ್ತಸ್ವರೂಪದ್ದಾಗಿರುವ ನಾರ್ವಾಲ್‌ನ ದಂತಕ್ಕೆ ನಾನಾ ದೈವೀ ಗುಣಗಳೂ, ಔಷಧೀಯ ಸಾಮರ್ಥ್ಯಗಳೂ ಇವೆ ಎಂದು ನಂಬಿರುವ ಮೂಢ ಜನ ಭಾರೀ ಸಂಖ್ಯೆಯಲ್ಲಿದ್ದಾರೆ. ನಾರ್ವಾಲ್‌ನ ಪ್ರತಿ ದಂತಕ್ಕೆ ಮೂರು–ನಾಲ್ಕು ಲಕ್ಷ ರೂ. ಬೆಲೆ ಇದೆ!

ಹಾಗಾಗಿ ಕಳೆದ ಶತಮಾನದ ಮಧ್ಯದಲ್ಲೂ ಲಕ್ಷಾಂತರ ಸಂಖ್ಯೆಯಲ್ಲಿದ್ದ ನಾರ್ವಾಲ್‌ಗಳ ಈಗಿನ ಸಂಖ್ಯೆ ಸುಮಾರು ಐವತ್ತು ಸಾವಿರಕ್ಕೆ ಕುಸಿದಿದೆ! ಎಂಥ ದುರಂತ!

■ ಎನ್. ವಾಸುದೇವ್